Sri N. C. NAGAIAH REDDY.—With due respect to the Chair, Sir, are there not other people carrying on some kind of activities in Mysore State?

(No answer.)

Cases under Removal of Civil Disabilities Act.

Q.—723. Sri M. CHIKKALINGIAH (Malavalli—Scheduled Castes).—

Will the Government be pleased to state:—

(*a*) the number and nature of cases that were detected while implementing the provisions in connection with the removal of untouchability in the State since the date of passing the Act;

(*b*) what is the action taken either through the courts of law or by any other methods in case of violation of provisions of the Act?

A.—Sri H. SIDDAVEERAPPA (Minister for Home and Industries).—

(*a*) Eight cases were put up as per details furnished in statement appended below.

(*b*) Cases are filed in courts for violation of the provisions of the Removal of Civil Disabilities Act.

Statement showing the number and nature of cases detected under the Removal of Social Disabilities Act.

Nature of Offence	No. of cases registered	Discharged	Compromised	Convicted	Acquitted	Pending
1. Refusal to allow entry into temples and other religious places.	1	...	...	...	1	...
2. Refusal to allow entry into shops, public restaurants, hotels and places of public entertainment.	6	...	...	3	1	2
3. Refusal to allow the use of wells, tanks and bathing ghats.	1	...	...	...	...	1
Total ...	8	...	...	3	2	3

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಸಿವಿಲ್ ಡಿಸ್ ಎಬಿಲಿಟೀಸ್ ಆಕ್ಟ್ ಕಾಗ್ನೈಸಬಲ್ ಎಂದು ಯಾವಾಗ ಆರ್ಡರ್ ಆಯಿತು?

Sri H. SIDDAVEERAPPA.—I would request the Hon'ble Member to have a little mistake corrected there. I have given the number as 8; it is 22. Please correct it.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇದು ಕಾನೂನಾದದ್ದು ಯಾವಾಗ?

Sri H. SIDDAVEERAPPA.—You know the Act has come into force from 1943. But when exactly it was made cognisable, I have not got that information. I want notice.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮೂಲಕ ತಾನೆ ಈ ಕೇಸುಸ್ ರಿಪೋರ್ಟ್ ಆಗುವುದು?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಚಿಕ್ಕಮಗಳೂರಿನ ಡೆಪ್ಯೂಟಿ ಕಮಿಷನರು ಎಂ. ಶಂಕರರಾಯರು ಮತ್ತು ಸಬ್ ಡಿವಿಜ್ ಆಫೀಸರು ತಿಪ್ಪಯ್ಯನವರು ಶೃಂಗೇರಿಗೆ ಹೋಗಿದ್ದಾಗ, ತಿಪ್ಪಯ್ಯನವರು ಹರಿಜನರು, ಅವರನ್ನು ಗೆಸ್ಟ್ ಹೌಸಿನ ಒಳಗೆ ಹೋಗದಹಾಗೆ ತಡೆದು ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರುವ ವರದಿ ಪ್ರಕಾರ ಡೆಪ್ಯೂಟಿ ಕಮಿಷನರು ಮತ್ತು ಸಬ್

ಡಿವಿಜ್ ಆಫೀಸರು ತಿಪ್ಪಯ್ಯನವರು ಶೃಂಗೇರಿ ಗೆಸ್ಟ್ ಹೌಸ್‌ಗೆ ಹೋಗಿದ್ದರು. ಆಗ ಡೆಪ್ಯೂಟಿ ಕಮಿಷನರು ಗೆಸ್ಟ್ ಹೌಸ್‌ನ ಒಳಗೆ ಹೋದರು, ಸಬ್ ಡಿವಿಜ್ ಆಫೀಸರಿಗೆ ನೀವು ಹೋಗುವುದಕ್ಕಾಗುವುದಿಲ್ಲ ಎಂದು ಹೇಳಿದರು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಬ್ ಡಿವಿಜ್ ಆಫೀಸರಿಗೆ ಒಳಗೆ ಹೋಗಕೂಡದು ಎಂದು ಹೇಳಿದವರು ಯಾರು, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಗೆಸ್ಟ್ ಹೌಸಿನ ಆಡಳಿತಗಾರರು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಯಾವ ಆಧಾರದ ಮೇಲೆ ಹೇಳಿದರು ಆ ಮಾತನ್ನು ?

ಶ್ರೀ ಕಡಿದಾಳ್ ಮಂಜಪ್ಪ.—ನಿಮಗೆ ಸ್ಥಳ ಇಲ್ಲ. ಬೇರೆ ಸ್ಥಳ ಮಾಡಿದ್ದೇವೆ ಎಂದು ಇರಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಬ್ ಡಿವಿಜ್ ಆಫೀಸರಿಗೆ ಬೇರೆ ಸ್ಥಳ ಮಾಡಿದ್ದಾರೆ ಎಂದಮೇಲೆ ಒಳಗೆ ಬರುವುದಕ್ಕೆ ಅವಕಾಶವಿಲ್ಲ ಎಂತಲೇ ?

ಶ್ರೀ ಕಡಿದಾಳ್ ಮಂಜಪ್ಪ.—ಡೆಪ್ಯೂಟಿ ಕಮಿಷನರಿಗೇ ಇಲ್ಲಿ ಸ್ಥಳ ಇರುವುದು ನಿಮಗೆ ಬೇರೆ ಸ್ಥಳ ಮಾಡಿದ್ದೇವೆ ಎಂದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಬ್ ಡಿವಿಜ್ ಆಫೀಸರಿಗೆ ಬೇರೆ ಕಡೆಗೆ ಹೋಗಿ ಎಂದು ಹೇಳಿದವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರು ಬೇರೆಕಡೆಗೆ ಹೋದಮೇಲೆ ಯಾವ ರೀತಿ ಟ್ರೀಟ್‌ಮೆಂಟ್ ಕೊಟ್ಟರು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಕಾರಣಾಪ್ಪೊಂದನ್ನೇ ಹಿಡಿದು ಅವರನ್ನು ಬೇರೆ ಕಡೆಗೆ ವರ್ಗ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿಲ್ಲ.

Sri M. CHIKKALINGIAH.—Is it not disgraceful on the part of the Deputy Commissioner to treat him like that ?

Sri Kadidal MANJAPPA.—The Deputy Commissioner is not responsible.

Sri M. CHIKKALINGIAH.—What action has been taken by the Government regarding this occurrence under this Act ?

Mr. SPEAKER.—I cannot understand you, Sri Chikkalingiah, when you pass remarks against a responsible officer of the District and when he is not held responsible by the Hon'ble Minister !

Sri M. CHIKKALINGIAH.—With due respect to the Chair, Sir, the Deputy Commissioner was present on the spot; and this has taken place in the presence of the Deputy Commissioner.

Mr. SPEAKER.—The Hon'ble Minister says he is not responsible for that. You have to base your remarks only on that answer.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ವಿಚಾರದಲ್ಲಿ ಈಗ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ನರಿಪಡಿಸುವುದಕ್ಕೆ ?

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಸ್ಟೇಟ್‌ಮೆಂಟಿನಂತೆ ಏನಾದರೂ ನ್ಯೂನತೆ, ಅಥವಾ ಲೋಪ ಇದ್ದರೆ ನರಿಪಡಿಸಬಹುದು. ಅದಕ್ಕೆ ಸಂಬಂಧಪಟ್ಟ ಗೆಸ್ಟ್ ಹೌಸಿನ ಆಡಳಿತಗಾರರು ಆ ರೀತಿ ಮಾಡಿದರು ಎಂದು ಹೇಳಿ ನನಗೆ ವರ್ತಮಾನ ಬಂದಿದೆ.

12-30 P.M.

ಶ್ರೀ ಕೆ. ಪ್ರಭಾಕರ್.—ಹಾಗೆ ಹೇಳಿದ್ದವರು ಸರ್ಕಾರಿ ಆಫೀಸರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲ.

ಶ್ರೀ ಕೆ. ಪ್ರಭಾಕರ್.—ಆ ರೀತಿಯಾಗಿ ಹೇಳಿದ್ದನ್ನು ಡೆಪ್ಯೂಟಿ ಕಮಿಷನರು ಖುದ್ದಾಗಿ ನೋಡಿದ್ದಾರಲ್ಲವೆ ?

Sri Kadidal MANJAPPA.—I do not know the details, Sir.

ಶ್ರೀ ಕೆ. ಪ್ರಭಾಕರ್.—ಅವರ ನೇತೃತ್ವದಲ್ಲಿ ಅದು ನಡೆದಮೇಲೆ ಅದು ತಪ್ಪೆಂದು ಅವರಿಗೆ ಮನವರಿಕೆಯಾಯಿತೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಗೊತ್ತಿಲ್ಲ.

ಶ್ರೀ ಕೆ. ಪ್ರಭಾಕರ್.—ಸರ್ಕಾರಕ್ಕೆ ಆ ವಿಚಾರದಲ್ಲಿ ಏನೂ ವರದಿ ಬಂದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಶೃಂಗೇರಿಗೆ ಹೋದಾಗ ನನಗೆ ತಿಳಿದುದನ್ನು ಹೇಳಿದೆ.

ಶ್ರೀ ಜಿ. ದುಗ್ಗಪ್ಪ.—ಇದು ಪಬ್ಲಿಕ್ ಗೆಸ್ಟ್‌ಹೌಸೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಮಠಕ್ಕೆ ಸೇರಿದ ಒಂದು ಸಂಸ್ಥೆ.

Sri G. DUGGAPPA.—Whether the Government gives any contribution for the maintenance of that guest house ?

Sri Kadidal MANJAPPA.—I want notice.

ಶ್ರೀ ಆರ್. ಮುನಿಸ್ವಾಮಯ್ಯ.—ಶ್ರೀ ಬಿ. ಟಿ. ಕೆಂಪರಾಜ್‌ರವರು ಆ ಪ್ರದೇಶಕ್ಕೆ ಹೋದಾಗ ಅವರನ್ನು ಅಲ್ಲಿಗೆ ಬಿಡಲಿಲ್ಲವೆಂಬುದು ನಿಜವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಇಲ್ಲೇ ಇದ್ದಾರೆ, ಕೇಳಬಹುದು.

ಶ್ರೀ ಆರ್. ಮುನಿಸ್ವಾಮಯ್ಯ.—ಆ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಯಾರೋ ಒಬ್ಬಿಬ್ಬರು ಅಸೆಂಬ್ಲಿ ಸದಸ್ಯರು ಹೋಗಿದ್ದರು, ಅವರಿಗೆ ಅವಕಾಶ ಕೊಡಲಿಲ್ಲ ಎಂದು ಗೊತ್ತಾಗಿದೆ. ನಿರ್ದಿಷ್ಟವಾಗಿ ಗೊತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಆ ಕಾಲದಲ್ಲಿ ಮುಖ್ಯ ಮಂತ್ರಿಗಳು ಎಚ್ಚರಿಕೆ ಕೊಟ್ಟರೆಂದು ಪತ್ರಿಕೆಗಳಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಆ ಗೆಸ್ಟ್‌ಹೌಸಿರುವುದೆಲ್ಲಿ ?

ಶ್ರೀ ಕಡಿದಾಳ್ ಮಂಜಪ್ಪ.—ಶೃಂಗೇರಿ ಟೌನಿನಲ್ಲಿ.

ಶ್ರೀ ಟಿ. ಹನುಮಯ್ಯ.—ಮಠದ ಆವರಣದಲ್ಲೇ ಅಥವಾ ಹೊರಗೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆವರಣದಲ್ಲೇ ಇರಬೇಕು.

ಶ್ರೀ ಟಿ. ಹನುಮಯ್ಯ.—ಅದನ್ನು ನೋಡಿಕೊಳ್ಳುವವರು ಯಾರು ?

ಅಧ್ಯಕ್ಷರು —ಅದಕ್ಕೆ ನೋಟೀಸ್ ಬೇಕೆಂದು ಹೇಳಿದ್ದಾರೆ.

ಶ್ರೀ ಟಿ. ಹನುಮಯ್ಯ.—ತಿಂಗಳಿಗೆ ಅಥವಾ ವರ್ಷಕ್ಕೆಷ್ಟು ಕೇಸು ಹಾಕಬೇಕೆಂದು ಮಾಡಿದ್ದೀರೋ ಅಥವಾ ಎಲ್ಲ ಸಂದರ್ಭಗಳಲ್ಲೂ ನೋಡಿ ಹಾಕಬೇಕೆಂದಿದೆಯೋ ?

ಅಧ್ಯಕ್ಷರು. —ಬೇರೆ ಪ್ರಶ್ನೆಯಿದ್ದರೆ ಕೇಳಿ.

Sri M. MADIAH.—Is the offence committed by any person made a cognisable offence under the provision of Civil Disabilities Act ?

Sri H. SIDDAVEERAPPA.—Yes, I have already said that it is a cognisable offence.

Sri M. MADIAH.—Has not any individual or the person affected made any complaint to the local officers concerned, Sir ?

Sri H. SIDDAVEERAPPA.—If what the Hon'ble Member is referring to the S. D. O. mentioned, *i.e.*, Sri Thippaiah, my information is, he has not complained.

Sri M. MADIAH.—Did any officer take cognisance of this offence either by a complaint of a person or from other sources ?

(No answer.)

ಶ್ರೀ ಜಿ. ಪುಟ್ಟಸ್ವಾಮಿ.—ರಾಜ್ಯಾಂಗದ ಪ್ರಕಾರ ಮಠಕ್ಕೆ ಅಥವಾ ದೇವಸ್ಥಾನಕ್ಕೆ ಹರಿಜನರಿಗೆ ಪ್ರವೇಶ ಕೊಡಬೇಕೆಂದು ನಿಯಮವಿಲ್ಲವೆ ?

ಅಧ್ಯಕ್ಷರು.—ಕಾನೂನಿನಲ್ಲೂ ಇದೆ, ರಾಜ್ಯಾಂಗದಲ್ಲೂ ಇದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಮಠದ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಹರಿಜನರಿಗೆ ಪ್ರವೇಶ ಮಾಡಲು ಅವಕಾಶ ಕೊಡಬೇಕೆಂದು ಹೇಳಿದಮೇಲೆ ಈಚೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ಕೇಸನ್ ಸರ್ಕಾರದ ಗಮನಕ್ಕೆ ಬಂದಾಗ ಸೂಕ್ತ ಕಾರ್ಯಕ್ರಮ ಕೈಗೊಂಡಿದ್ದೇವೆ. ಇದರಲ್ಲಿರುವುದು ಸಾರ್ವಜನಿಕ ದೇವಸ್ಥಾನ, ಮಠ ಇವುಗಳಿಗೆ ಯಾರೂ ಜಾತಿ ಆಧಾರದ ಮೇಲೆ ಹೋಗಲು ತಡೆಮಾಡಕೂಡದು, ಮಾಡಿದರೆ ತಕ್ಕೀರು ಆಗುತ್ತದೆ ಎಂಬ ಭಾವನೆ.

Ferro-Silicon Plant, Bhadravati.

Q.—844. **Sri S. GOPALA GOWDA** (Sagar-Hosanagar).—

Will the Government be pleased to state :—

(*a*) when did the Ferro-Silicon plant at Bhadravati cease working ;

(*b*) what are the damages caused to the plant and the loss involved in (i) the replacement or repair of the damages to the plant and (ii) loss in production ;

(*c*) whether the plant has begun working, and if so, since how many days ;

(*d*) the average production during the last two years ;

(*e*) what are the reasons for the breakdown of the plant and fall in production ?

A.—**Sri H. SIDDAVEERAPPA** (Minister for Home and Industries).—

(*a*) On 4-12-1953 (8-30 P.M.)

(*b*) Large part of carbon lining and some parts of fire-brick lining inside the Furnace Shell had been worn out. There was no real loss in production or repairs since prompt action was taken to stop the Furnace and effect the repairs and the breakdown occurred when the Furnace would have been normally shut down for periodical inspection and major repairs which is done once in about 8 months.

(*c*) Yes, since 20-1-1954.

(*d*) 3,684 tons per year.

(*e*) Sudden break out through the Furnace Shell, as a large part of the carbon and fire-brick lining inside the Shell had worn out.

ಶ್ರೀ ಎಸ್. ಗೋಪಾಲಗೌಡ.—ಈ ಫೆರೋಸಿಲಕಾರ್ಬ್ ಯಂತ್ರದ ಕ್ರಯವೆಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಸ್. ಗೋಪಾಲಗೌಡ.—ಇಂಥ ಫೆರೋಸಿಲಕಾರ್ಬ್ ಯಂತ್ರ ಇಂಡಿಯಾ ದೇಶದಲ್ಲಿ ಬೇರೆ ಯಾವ ಕಡೆಯಲ್ಲಾದರೂ ಇದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಗೊತ್ತಿಲ್ಲ, ನನಗೆ ತಿಳಿದಿರುವ ಹಾಗೆ ಹೆಚ್ಚಾಗಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಇತ್ತೀಚೆಗೆ ತಾವು ಭದ್ರಾವತಿಗೆ ಭೇಟಿಕೊಟ್ಟಾಗ ಈ ಯಂತ್ರ ಯಾವರೀತಿ ಕೆಲಸ ಮಾಡುತ್ತಿದೆಯೆಂಬುದನ್ನು ಪರಾಂಬರಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನೋಡಿದ್ದೇನೆ. ದಿವಸವೂ ವರದಿ ಸಹ ನನಗೆ ಬರುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಈಚೆಗೆ ಪ್ರೊದರ್ಕ್ಷ್ ಬಹಳವಾಗಿ ಬದ್ದುಹೋಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಅಲ್ಲಿನ ತಯಾರಿಕೆ ಅಷ್ಟೇನೂ ಬದ್ದುಹೋಗಿಲ್ಲವೆಂದು ಸರ್ಕಾರಕ್ಕೆ ಗೊತ್ತಾಗಿದೆ. ಯಂತ್ರ ಕೆಟ್ಟು ಸ್ವಲ್ಪ ತೊಂದರೆಯಾಗಿದೆ. ಅದೂ ಅಲ್ಲದೆ 8 ತಿಂಗಳಿಗೊಂದುಸಲ ನಾರ್ಮಲ್ಲಾಗಿ ಷಟ್‌ಡೌನ್ ಮಾಡಬೇಕು. ರಿಪೇರಿಯಾಗುವಾಗ, ಕ್ಲೀನಿಂಗ್ ಇರುವಾಗ ಷಟ್‌ಡೌನ್ ಮಾಡುವುದರಿಂದ ಉತ್ಪನ್ನ ಒಂದೇಸಮನಾಗಿರುವುದಿಲ್ಲ. ಅದರ ರಿಪೇರಿ ವಗೈರೆ ಆದಮೇಲೆ ಸರಿಯಾಗಿ ಯಂತ್ರ ಕೆಲಸ ಮಾಡುತ್ತಿದೆಯೆಂದು ಗೊತ್ತಾಗಿದೆ.